ವಿದ್ಯಾನಾಗ್, ಬೆಂಗಳೂರು
*ಹಿಂದಿನ ರಾಕ್ಷಸರಿಗೂ, ಇಂದಿನ ರಾಜಕಾರಣಿಗಳಿಗೂ ಏನು ವ್ಯತ್ಯಾಸ?*



ಯಾವುದೇ ರಾಕ್ಷಸ ತನ್ನ ದೇಶದ ಸಂಪತ್ತನ್ನು ಬೇರೆ ದೇಶದಲ್ಲಿ ಅಡಗಿಸಿಟ್ಟ ದಾಖಲೆ ಇಲ್ಲ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
*ನಮ್ಮ ಬೆರಳು ಅಕಸ್ಮಾತ್ ಕಣ್ಣನ್ನು ತಿವಿದರೆ ನಾವೇಕೆ ಬೆರಳನ್ನು ಶಿಕ್ಷಿಸುವುದಿಲ್ಲ?*
ಶಿಕ್ಷಿಸಿದರೆಂದು ಬೆರಳು ಸ್ಟ್ರೈಕ್ ಮಾಡಿದರೆ ಸ್ಪೂನ್ ಹಿಡಿಯಲೂ ಆಗದೆ ಹೊಟ್ಟೆಗೆ ಶಿಕ್ಷೆಯಾದೀತೆಂಬ ಭಯ!

ಎಸ್.ಜಿ. ಕರನಂದಿ, ಹುನಗುಂದ
*ಮುಂಜಾನೆ ಎದ್ದ ಬಳಿಕ ಭೆಟ್ಟಿಯಾದವರಿಗೆ 'ಏನು ಎದ್ದಿರಾ?' ಅಂತ ಕೇಳುತ್ತಾರಲ್ಲ, ಏನಿದರ ವಿಶೇಷ?*
ನಿದ್ರೆಯಲ್ಲಿ ನಡೆಯುವ ರೋಗ ಇಲ್ಲವೆಂದು ಖಚಿತಪಡಿಸಿಕೊಳ್ಳುವ ಬಗೆ ಇದು.

ವಿ. ಹೇಮಂತಕುಮಾರ್, ಬೆಂಗಳೂರು
*ಹೆಣ್ಣಿನ ಹಣೆಯಲ್ಲಿ ಬೆವರ ಹನಿ ಮೂಡುವುದು ಯಾವಾಗ?*



ಹುಬ್ಬಿನ ಮೇಲ್ಭಾಗದಲ್ಲಿ ವ್ಯಾಕ್ಸಿಂಗ್, ಥ್ರೆಡಿಂಗ್ ಮಾಡಿಸಿಕೊಳ್ಳುವಾಗ ನೋವಾದಾಗ.

ರಮಾನಂದ ಶರ್ಮ, ಬೆಂಗಳೂರು
*ಈ ದೇಶದಲ್ಲಿ ಮುಷ್ಕರ ಹೂಡದವರು ಇದ್ದಾರೆಯೆ?*
ಇಲ್ಲಷ್ಟೇ ಅಲ್ಲ, ಇಡೀ ವಿಶ್ವದೆಲ್ಲೆಡೆ ಇದ್ದಾಳೆ – ಅಮ್ಮ.

ಮೆಹಬೂಬ ಶೇಖಬಡ್, ಮೂಡಲಗಿ
*ಇಲ್ಲೊಬ್ಬ ನನ್ನ ಕವಿತೆ ಕದ್ದಿದ್ದೀಯಾ ಅಂತ ನನ್ನ ಮೇಲೆ ಕುದಿಯುತ್ತಿದ್ದಾನೆ. ಏನು ಮಾಡಲಿ?*
'ದಡ್ಡ! ನಿನ್ನ ಹುಡುಗಿಯನ್ನೇ ಕದ್ದಿದ್ದೇನೆ... ಅದೇ ಹುಡುಗಿ, ಅದೇ ಕವನ' ಎಂದುಬಿಡಿ!

ವಿದ್ಯಾ ಎನ್. ಪೈ, ಕಾಸರಕೋಡ
*ಸತ್ಯ ಕಂಡಾಗ ಸುಳ್ಳು ಓಡುವುದೇಕೆ?*
'ನನ್ನನ್ನು ಗೆಲ್ಲು ನೋಡೋಣ' ಎಂದು ರನ್ನಿಂಗ್ ರೇಸ್‌ಗೆ ಆಹ್ವಾನಿಸುವ ರೀತಿ ಅದು.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಜ್ಯೋತಿಷಿಗಳ ಭವಿಷ್ಯ ಹೇಳುವವರಾರು?*
ಏರಿದರೆ ಶುಕ್ರದೆಸೆ, ಇಳಿದರೆ ಶನಿದೆಸೆ ತಂದೊಡ್ಡುವ ಟಿಆರ್‌ಪಿ ಮಹಾತ್ಮ!

ಸೃಜನ್ ಜೈನ್, ಹೂವಿನಹಡಗಲಿ
*ಭೂಮಿಗೆ ಬಾಯಿಲ್ಲ. ಆದರೆ ಹೆಣ್ಣೇಕೆ?*
ಯಾರು ಹೇಳಿದ್ದು? ಬೆಂಗಳೂರಿನ ಪ್ರತಿ ರಸ್ತೆಯಲ್ಲೂ ಭುವಿಗೆ ನೂರಾರು ಬಾಯಿಗಳಿವೆ.

ರತ್ನಜ, ಮೈಸೂರು
*ಯಾರೂ ಕದಿಯಲಾಗದ್ದು ಏನು?*
ಯಾರಿಗೂ ಬೇಡವಾದದ್ದು.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
*ರಾಮ್‌ಜಿ ಒಂದು ದಿನಕ್ಕೆ ಪ್ರಧಾನಿಯಾದರೆ?*
ಎರಡೇ ಕೆಲಸ ಸಾಧ್ಯ– ಬೆಳಗ್ಗೆ ಪ್ರಮಾಣ ವಚನ, ಸಂಜೆ ಪ್ರಣಾಮ ವಚನ!

ವಿ.ಎಸ್. ಹಿಂದೂಪುರ, ಬಳ್ಳಾರಿ
*ನೀವು ಸಿಗರೇಟ್ ಸೇದುತ್ತಾ ಉತ್ತರ ಬರೆಯುತ್ತೀರಾ?*
ಏಕೆ? ನನ್ನ ಉತ್ತರಗಳು ಆರೋಗ್ಯಕ್ಕೆ ಹಾನಿಕರವಾಗಿರುತ್ತವೆಯೆ?

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಸೃಷ್ಟಿಯ ಕನ್ನಡಿ ಯಾವುದು?*
ನಿಃಸ್ವಾರ್ಥ ಶಕ್ತನ ಪರೋಪಕಾರಿ ಮನಸ್ಸು.

ಎಸ್.ಎನ್. ಮಹಾಬಲರಾವ್, ಎನ್ನಾರ್ ಪುರ
*ತನು ಮನೆಯಲ್ಲಿದ್ದರೂ ಮನಸ್ಸು ಮನೆಯಲ್ಲಿಲ್ಲವಲ್ಲಾ...?*
ಅಲೆಯಲಿ ಬಿಡಿ; ಬರುವಾಗ ವಿಷ ತರದೆ ವಿಷಯ ತರುವಂತೆ ಅದನ್ನು ನಿಯಂತ್ರಿಸಿದರೆ ಸಾಕು.

## ಬಹುಮಾನಿತ ಪ್ರಶ್ನೆ

ಎನ್. ದಿನೇಶ್, ತೀರ್ಥಹಳ್ಳಿ
*ಈಗಿನ ಕಾಲದಲ್ಲಿ ವಿಜ್ಞಾನಿಗಳಿದ್ದರೂ ಅಜ್ಞಾನಿಗಳ ಸಂಖ್ಯೆ ಹೆಚ್ಚಾಗಿರುವುದಕ್ಕೆ ಕಾರಣವೇನು?*
ವಿಚಾರದಿಂದ ವಿಜ್ಞಾನಿಗಳಾಗಿರುವ ಹಲವರೂ ಆಚಾರದಿಂದ ಅಜ್ಞಾನಿಗಳಾಗಿರುವುದರಿಂದ.

ಅಮರಯ್ಯಾ ಪತ್ರಿಮಠ, ಸುರಪೂರ
*ಸದಾ ನಗುತ್ತಿರುವವರನ್ನು ನಂಬಬಾರದಂತೆ?*
ಹೌದು. ಸದಾ ನಗುವುವವರೆಡೇ – ಟೂತ್‌ಪೇಸ್ಟ್ ಜಾಹೀರಾತಿನಲ್ಲಿನ ವ್ಯಕ್ತಿ, ಶೋಕೇಸಿನ ಗೊಂಬೆ. ಎರಡೂ ಶುದ್ಧ ಸುಳ್ಳೇ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
*ಹೆಣ್ಣು, ಹೊನ್ನು, ಮಣ್ಣು, ಮೊಬೈಲ್‌ಗಳಲ್ಲಿ ಯಾವುದು ಹೆಚ್ಚು ಅಪಾಯಕಾರಿ?*
ಮಿಕ್ಕೆಲ್ಲವನ್ನೂ ಸಂಯಮದಿಂದ ಕಾದು ತನ್ನ ತೆಕ್ಕೆಗೆ ನಿಶ್ಚಿತವಾಗಿ ತೆಗೆದುಕೊಳ್ಳುವ ಮಣ್ಣೇ.

ವಿ. ಹಮೀದ್, ವಿಟ್ಲ
*ಸರ್ಕಸ್ ಹುಡುಗಿಯರು ತುಂಡು ಲಂಗ ಧರಿಸುವುದೇಕೆ?*



ಲಾಗದ, ವೇಗದ ಚಲನೆಗೆ ತೊಡರುಲಂಗಕ್ಕಿಂತ ತುಂಡುಲಂಗವೇ ಶ್ರೇಷ್ಠ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಸನ್ಯಾಸಿಗಳು ಕಷಾಯದ ಬಣ್ಣದ ಜೀನ್ಸ್ ಪ್ಯಾಂಟ್ ಧರಿಸಿದರೆ...?*
'ಆರ್ಟ್ ಆಫ್ ಮಾಡ್ರನ್ ಲಿವಿಂಗ್' ಉಗಮವಾಗುತ್ತದೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
*ತಾಯಿಯಿಂದ, ಗುರುಗಳಿಂದ, ದೈವಬಲದಿಂದ ವಂಚಿತನಾದ ಕರ್ಣನ ತಪ್ಪು ಏನು?*
ಅವನ ತಪ್ಪಿಲ್ಲದಿರಬಹುದು, ಅಮ್ಮನದಿತ್ತಲ್ಲ; ಎಡವಿದ ನಾರಿಯ ಮಕ್ಕಳ ದಾರಿ ಎಡವಟ್ಟೇ.

■ ರಾಮ್